ಸಹಾಯ ಧನ ಪ್ರತಿ ಹೆಚ್.ಪಿ.ಗೆ ವಾರ್ಷಿಕ ರೂ. 720 ಮತ್ತು ರೂ. 540 ರೂಪಾಯಿಗಳ ವ್ಯತ್ಯಾಸದ ಹಣ)	
ಮಲೆನಾಡು ಪ್ರದೇಶಗಳಲ್ಲಿ ವಿದ್ಯುತ್ ದರಗಳ ತಾರ್ಕಿಕ ಹೊಂದಾಣಿಕೆ	15.00
ಹುಕ್ಕೇರಿ ಸೊಸೈಟಿಗೆ ಪರವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ವಹಿಸುತ್ತಿರುವ ಸಾಲ ತೀರುವಳಿ ಸೇವೆ	15.73
ಕರ್ನಾಟಕ ಸರ್ಕಾರದ ಪರವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ವಹಿಸುತ್ತಿರುವ ಸಾಲ ತೀರುವಳಿ ಸೇವೆ.	339.33
ಪಿಂಚಣಿ ಬಾಕಿ:	47.00
(2002–03ರೂ. 30 ಕೋಟಿ (2003–04 ರೂ. 17 ಕೋಟಿ)	
ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾಗಿರುವ ಬಾಕಿ ಹಣದ ಮೊತ್ತ	601.38
ಒಟ್ಟು	**4098.84**

.....

42 (282): ಶ್ರೀ ಶಿವಾನಂದ ನಾಯ್ಕ (ಭಟ್ಕಳ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾವರ ಬಳಿ ಶರಾವತಿ ನದಿಗೆ ಅಡ್ಡಲಾಗಿ ಸೇತುವೆ ಯಾವಾಗ ನಿರ್ಮಿಸಲಾಯಿತು! ಈ ಸೇತುವೆ ನಿರ್ಮಾಣಕ್ಕೆ ಆದ ವೆಚ್ಚ ಎಷ್ಟು?

ಆ) ನಿರ್ಮಾಣ ಪೂರ್ಣಗೊಳಿಸಿದ ವರ್ಷದಿಂದ ಇಲ್ಲಿಯವರೆಗೆ ಸೇತುವೆ ದುರಸ್ತಿಗಾಗಿ ತಗುಲಿದ ವರ್ಷಾವಾರು ವೆಚ್ಚವೆಷ್ಟು?

ಇ) ಸೇತುವೆ ದುರಸ್ತಿ ಕಾರ್ಯಗಳಿಗಾಗಿ ಹಾಕಿರುವ ಕಮಾನು ಯಾವಾಗ ತೆಗೆಯಲಾಗುವುದು?

ಈ) ಗರಿಷ್ಟ ಎಷ್ಟು ಟನ್ ತೂಕದ ವಾಹನಗಳು ಸೇತುವೆ ಮೇಲೆ ಓಡಾಡಲು ಅನುಮತಿ ನೀಡಲಾಗಿದೆ?

ಉ) ಸೇತುವೆ ಶುಲ್ಕ ವಸೂಲಾತಿಯಿಂದ ಇಲ್ಲಿಯವರೆಗೆ ಗಳಿಸಿದ ವರ್ಷಾವಾರು ಆದಾಯ ಎಷ್ಟು? ಶುಲ್ಕ ವಸೂಲಾತಿಯನ್ನು ಇನ್ನು ಎಷ್ಟು ವರ್ಷದವರೆಗೆ ಮುಂದುವರೆಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಶರಾವತಿ ಸೇತುವೆಯು 1970ನೇ ಇಸವಿಯಲ್ಲಿ ನಿರ್ಮಿಸಲಾಯಿತು. ಈ ಸೇತುವೆ ನಿರ್ಮಾಣಕ್ಕೆ ರೂ. 112/- ಲಕ್ಷಗಳು ವೆಚ್ಚವಾಗಿರುತ್ತದೆ.

ಆ) ನಿರ್ಮಾಣ ಪೂರ್ಣಗೊಳಿಸಿದ ವರ್ಷದಿಂದ ಇಲ್ಲಿಯವರೆಗೆ ಸೇತುವೆ ದುರಸ್ತಿಗಾಗಿ ತಗುಲಿದ ವರ್ಷವಾರು ಈ ಕೆಳಗಿನಂತಿದೆ:

	ರೂ.ಗಳಲ್ಲಿ
1995-96	3547512.00
1996-97	28844840.0
1997-98	48123195.00
1998-99	20191589.00
1999-2000	1389801.00
2000-2001	3074.00
ಒಟ್ಟು	**10,21,00,021.00**

ಇ) ಸೇತುವೆಗೆ ಹಾಕಿರುವ ಕಮಾನು ತೆಗೆಯಲು ಹರಾಜು ಪ್ರಕ್ರಿಯೆ ನಡೆಸಿದ್ದು, ಸದ್ಯದಲ್ಲೇ ಕಮಾನನ್ನು ತೆಗೆಯಲಾಗುವುದು.

ಈ) ಶರಾವತಿ ಸೇತುವೆಯ ಮೇಲೆ ಸಿಂಗಲ್ ಆಕ್ಸಲ್‌ಗೆ 10.2 ಮೆ.ಟನ್, ಡಬಲ್ ಆಕ್ಸಲ್‌ಗೆ 18 ಮೆ.ಟನ್ ತ್ರಿಬಲ್ ಆಕ್ಸಲ್‌ಗೆ 35 ಮೆ.ಟನ್ ಹಾಗೂ 5 ಆಕ್ಸಲ್‌ಗೆ 55 ಮೆ.ಟನ್ ಭಾರದ ವಾಹನಗಳು ಓಡಾಟಕ್ಕೆ ಅನುಮತಿ ಇದೆ.

ಶುಲ್ಕ ವಸೂಲಾತಿಯ ವರ್ಷವಾರು ಆದಾಯ ಈ ಕೆಳಗಿನಂತಿದೆ:

ರೂ.ಗಳಲ್ಲಿ	
1997-98	6761939.00
1998-99	9125000.00
1999-2000	7700000.00
2000-2001	10070000.00
2001-02	10372280.00
2002-03	9884340.00
2003-04	10134472.00
2004-05	2766204.00
ಇಲ್ಲಿಯವರೆಗೆ ಒಟ್ಟು ರೂ.	**6,68,14,235.00**

ಸೇತುವೆ ಮೇಲಿನ ಶುಲ್ಕ ವಸೂಲಾತಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ದಿನಾಂಕ: 19-2-1992ರ ಅಧಿಸೂಚನೆಯಂತೆ, ಸೇತುವೆ ನಿರ್ಮಾಣ ಪೂರ್ಣ ವೆಚ್ಚ, ನಿರ್ವಹಣೆ ದುರಸ್ತಿ ವೆಚ್ಚ ಹಾಗೂ ಇದರ ಮೇಲಿನ ವರ್ಷಾವಾರು ಬಡ್ಡಿ ಇತ್ಯಾದಿ ವಸೂಲಾಗುವವರೆಗೆ ಮುಂದುವರೆಸಲಾಗುವುದು.

....

43 (298): ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಯಾವ ಯಾವ ವರ್ಷ ರಾಷ್ಟ್ರೀಯ ಹೆದ್ದಾರಿಗಳೆಂದು ಕೇಂದ್ರ ಸರ್ಕಾರ ಘೋಷಿಸಿದೆ: (ಆದೇಶದ ಪ್ರತಿಗಳನ್ನು ಒದಗಿಸುವುದು) ಇವುಗಳ ಮಾರ್ಗ ಮತ್ತು ಉದ್ದಳತೆಗಳ ವಿವರ ಮತ್ತು ಕಳೆದ ಮೂರು ಆರ್ಥಿಕ ಸಾಲಿನಿಂದ ಇಂದಿನವರೆವಿಗೂ ಕೇಂದ್ರ ಸರ್ಕಾರವು ಈ ರಸ್ತೆಗಳಿಗೆ ವಿವಿಧ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು?

ಆ) ಕಳೆದ ಮೂರು ವರ್ಷಗಳಿಂದ ಸರ್ಕಾರವು ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೋರಿ ಕೇಂದ್ರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳೆಷ್ಟು; ಅವುಗಳ ವಿವರಗಳನ್ನು ಒದಗಿಸುವುದು;

ಇ) ಸರ್ಕಾರದ ನೇರ ನಿಯಂತ್ರಣದಲ್ಲಿರುವ ರಸ್ತೆಗಳ ವಾರ್ಷಿಕ ಕಾರ್ಯನಿರ್ವಾಹಣೆಗಾಗಿ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು ಮತ್ತು ಈ ಸಂಬಂಧವಾಗಿ ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಾರು ಖರ್ಚು ಮಾಡಲಾಗಿರುವ ಹಣದ ವಿವರ ನೀಡುವುದು:

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 14 ರಾಷ್ಟ್ರೀಯ ಹೆದ್ದಾರಿಗಳಿವೆ. ಅವುಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಈ ಹೆದ್ದಾರಿಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ 5054 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ಮೊತ್ತದ ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ವರ್ಷಗಳು	ಮೊತ್ತ ಕೋಟಿ ರೂ.ಗಳಲ್ಲಿ
1.	2001-02	109.88
2.	2002-03	89.56
3.	2003-04	150.35

ಆ) ಕಳೆದ ಮೂರು ವರ್ಷಗಳಲ್ಲಿ 6 ರಾಜ್ಯ ಹೆದ್ದಾರಿ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅವುಗಳ ವಿವರ ಅನುಬಂಧ-2ರಲ್ಲಿ ನೀಡಲಾಗಿದೆ.